# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:**25/11/2020** ರಂದು **ಬೆಳಿಗ್ಗೆ:10.30** ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೇಗೂರು ವಾರ್ಡ್ ಸಂಖ್ಯೆ-192 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಸಮ್ಮುಖದಲ್ಲಿ ಅವರ ಅಧ್ಯಕ್ಷತೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಚಲುವರಾಜು.ಎಸ್. ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-192 ಬೇಗೂರು ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

## ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:

1. ಕುಡಿಯುವ ನೀರು ಸರಬರಾಜು ಬಗ್ಗೆ ಚರ್ಚಿಸುವುದು
2. ಘನತ್ಯಾಜ್ಯ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡುವ ಬಗ್ಗೆ ಚರ್ಚಿಸುವುದು.
3. ವಾರ್ಡ್‌ನ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು.
4. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.
5. ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಅಗೆದಿರುವ ಟ್ರೆಂಚ್‌ಗಳನ್ನು ಮುಚ್ಚುವ ಬಗ್ಗೆ ಚರ್ಚಿಸುವುದು.
6. ಮಳೆ ನೀರು ಹರಿಯುವ ಚರಂಡಿಗಳನ್ನು ಸ್ವಚ್ಛಗೊಳಿಸುವ ಬಗ್ಗೆ.
7. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವ ಬಗ್ಗೆ.

## ವಾರ್ಡ್ ನಂ 192 ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದವರು

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ.ನೀಲಕಂಠಯ್ಯ.ಕೆ.ಪಿ. | ಅಧ್ಯಕ್ಷರು/ನೋಡೆಲ್ ಅಧಿಕಾರಿಗಳು |
| 2 | ಶ್ರೀ.ಚಲುವರಾಜು.ಎಸ್. | ಕಾರ್ಯದರ್ಶಿ (ಕಿ.ಅ.) |
| 3 | ಶ್ರೀ.ಆರ್.ಕುಮಾರ್. | ಬೆಸ್ಕಾಂ. ಸ.ಕಾ.ಅ. |
| 4 | ಶ್ರೀಮತಿ.ವಿನಯಕುಮಾರಿ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5 | ಶ್ರೀ.ರಮೇಶ್ | ಸ.ಕಾ.ಅ. ಬೀದಿ ದೀಪ ಇಲಾಖೆ |
| 6 | ಶ್ರೀ.ಸಂತೋಷ್ ದೀಪು | ಅರಣ್ಯ |
| 7 | ಶ್ರೀ.ರಮೇಶ್.ಎಲ್. | ಕಿ.ಆ.ಪ. |
| 8 | ಶ್ರೀ.ಶ್ರೀಧರ್.ಎಸ್. | ಹಿ.ಆ.ಪ |
| 9 | ಶ್ರೀ.ರಾಜೇಂದ್ರ ರೆಡ್ಡಿ | ಸದಸ್ಯರು |
| 10 | ಶ್ರೀ.ಮಂಜುನಾಥ 92 ವಾರ್ಡ್ ಸಮಿತಿ | ಸಧಸ್ಯರು |
| 11 | ಶ್ರೀ.ಚಿಕ್ಕ ನರಸಿಂಹಯ್ಯ | ಸದಸ್ಯರು |
| 12 | ಶ್ರೀಮತಿ.ಶಿಲ್ಪ ರಮೇಶ್ | ಸಧಸ್ಯರು |

# ಸಭೆಯ ನಡಾವಳಿಗಳು

1. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲು ಈ ಬಗ್ಗೆ ದೂರು ಬರದಿರುವಂತೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.
   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192

2. ಸದರಿ ವಾರ್ಡ್‌ನ ಪರಿವೀಕ್ಷಣಾ ಸಮಯದಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಹಾಗೂ ದೈನಂದಿನ ಕಸ ಸಂಗ್ರಹಣೆ ಮಾಡದಿರುವ ಬಗ್ಗೆ ಹಾಗೂ ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಹಾಗೂ ಘನತ್ಯಾಜ್ಯದ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡಲು ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.
   ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣಾ ಘಟಕ)

3. ಸಾರ್ವಜನಿಕರ ಕುಂದು ಕೊರತೆಗಳಲ್ಲಿ ಹೆಚ್ಚಾಗಿ ಒಳಚರಂಡಿ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರು ಮಾತನಾಡಿದ್ದು ಒಳಚರಂಡಿ ಪೈಪ್ ಲೈನ್ ಬ್ಲಾಕ್ ಆದಾಗ ಕೂಡಲೇ ಸರಿಪಡಿಸುವುದಿಲ್ಲ ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ತುಂಬಿರುವ ಮಣ್ಣು ಮತ್ತು ಇತರೆ ವಸ್ತಗಳನ್ನು ತೆಗೆದು ಸ್ವಚ್ಛಗೊಳಿಸುವಂತೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿರುತ್ತಾರೆ.
   ಕ್ರಮ: ವಾರ್ಡ್‌ನ ಸಹಾಯಕ ಅಭಿಯಂತರರು ಈ ಬಗ್ಗೆ ಜರೂರಾಗಿ ಕ್ರಮವಹಿಸುವಂತೆ ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯದ ಬಗ್ಗೆ ಸಾರ್ವಜನಿಕರು ತೃಪ್ತಿ ವ್ಯಕ್ತಪಡಿಸಿದ್ದು ಇದೇ ರೀತಿ ಮುಂದೆಯೂ ಸಹ ಗುಂಡಿಗಳು ಉಂಟಾದ ತಕ್ಷಣ ಮುಂಚುವಂತೆ ವಾರ್ಡ್ ಸಮಿತಿ ಅಧ್ಯಕ್ಷರಲ್ಲಿ ಕೋರಿಕೊಂಡಿರುತ್ತಾರೆ.
   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

5. ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ರಸ್ತೆಯನ್ನು ಅಗೆದು ಮಣ್ಣನ್ನು ರಸ್ತೆ ಪಕ್ಕದ ಚರಂಡಿಗಳಿಗೆ ತುಂಬಿರುವ ಬಗ್ಗೆ ಹಾಗೂ ಅಗೆದಿರುವ ರಸ್ತೆಗಳನ್ನು ಮುಚ್ಚದಿರುವ ಬಗ್ಗೆಯೂ ಸಹ ಸಾರ್ವಜನಿಕರು ಆಕ್ರೋಶವ್ಯಕ್ತಪಡಿಸಿರುತ್ತಾರೆ.
   ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರು, ಮತ್ತು ಎಲ್.& ಟಿ.

6. ರಸ್ತೆಯ ಪಕ್ಕದ ಚರಂಡಿಗಳನ್ನು ಮತ್ತು ಕಲ್ವರ್ಟ್‌ಗಳನ್ನು ಸ್ವಚ್ಛಗೊಳಿಸಿ ಹೂಳನ್ನು ತೆಗೆದು ಹೊರಸಾಗಿಸುವಂತೆ ಅಕ್ಷಯನಗರ ನಿವಾಸಿಗಳು ಕೋರಿಕೊಂಡಿರುತ್ತಾರೆ.
   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

7. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವಂತೆ ಅಧ್ಯಕ್ಷರು ವೈದ್ಯಾಧಿಕಾರಿರವರಿಗೆ ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರುಸೂಚಿಸಿದರು
ಕ್ರಮ: ವೈದ್ಯಾಧಿಕಾರಿಗಳು, ಬೇಗೂರು, ಪ್ರಾಥಮಿಕ ಆರೋಗ್ಯ ಕೇಂದ್ರ.

**ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ -192 ಬೇಗೂರು

25/11/2020

ಅಧ್ಯಕ್ಷರು
ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ-192, ಬೇಗೂರು

**ಪ್ರತಿಗಳು:-**

1) ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
2) ಉಪ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ
3) ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ಉಪವಿಭಾಗ ರವರ ಅವಗಾಹನೆಗೆ ಮಂಡಿಸಿದೆ
4) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
5) ಕಛೇರಿ ಕಡತಕ್ಕೆ